ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಲ್ಲಿ ದಿನಾಂಕ 30.9.2000ಕ್ಕೆ ಇದ್ದಂತೆ ಸುಮಾರು 9,16,986 ಮೆ.ಟನ್ ಸಕ್ಕರೆ ದಾಸ್ತಾನು ಇದೆ. ಇದರ ಬೆಲೆ ಸುಮಾರು ರೂ.1192 ಕೋಟಿಗಳಷ್ಟು ಆಗಬಹುದಾಗಿದೆ.

ಆ) ಕೇಂದ್ರ ಸರ್ಕಾರದಿಂದ ಆಗಿಂದಾಗ್ಗೆ ಮಾಡುವ ಬಿಡುಗಡೆಯ ಆದೇಶಗಳನುಸಾರ ಸಕ್ಕರೆಯು ಕಾರ್ಖಾನೆಗಳಿಂದ ಲೆವಿ ಮತ್ತು ಮುಕ್ತ ಮಾರುಕಟ್ಟೆಗೆ ಬಿಡುಗಡೆಯಾಗುತ್ತಿರುತ್ತದೆ. ಕೆಲವು ಸಂದರ್ಭಗಳಲ್ಲಿ ಸಕ್ಕರೆ ಕಾರ್ಖಾನೆಗಳಿಂದ ಹೆಚ್ಚುವರಿ ಸಕ್ಕರೆ ಬಿಡುಗಡೆ ಕೋರಿ ಬರುವ ಪ್ರಸ್ತಾವನೆಗಳನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ.

ಇ) ರೈತರು ಸರಬರಾಜು ಮಾಡಿದ ಕಬ್ಬಿಗೆ ಕಾರ್ಖಾನೆಯು ಸಮಯಕ್ಕೆ ಸರಿಯಾಗಿ ಬಿಲ್ಲು ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದರ ವಿತರಣೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ರಾಷ್ಟ್ರ ಮಟ್ಟದಲ್ಲಿ 10 ಲಕ್ಷ ಟನ್ ಸಕ್ಕರೆಯನ್ನು ಹೊರದೇಶಗಳಿಗೆ ರಫ್ತು ಮಾಡಲು ಅನುಮತಿ ನೀಡಿರುತ್ತದೆ. ರಾಜ್ಯದಿಂದ ಸುಮಾರು ಒಂದು ಲಕ್ಷ ಟನ್ ಸಕ್ಕರೆಯನ್ನು ರಫ್ತು ಮಾಡುವ ನಿರೀಕ್ಷೆ ಇರುತ್ತದೆ. ಈ ಮೂಲಕ ರೈತರಿಗೆ ಆಗಬಹುದಾದ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ನಿವಾರಿಸಬಹುದಾಗಿದೆ.

ಸಕ್ಕರೆ ಕಾರ್ಖಾನೆಗಳ ಹೆಸರು ಮತ್ತು ಜಿಲ್ಲೆ ರೈತರಿಗೆ ಸಕಾಲದಲ್ಲಿ ಹಣ ಪಾವತಿ ಮಾಡುವ ವಿಚಾರ

4963 - ಶ್ರೀ ಕರಿಯಣ್ಣ (ಹೊಳಿಹೊನ್ನೂರು) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ? ಇದಕ್ಕೆ ಅನುಗುಣವಾಗಿ ಯಾವ ಯಾವ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಇವೆ? (ಸರ್ಕಾರ, ಖಾಸಗಿ ಸಹಕಾರಗಳಿಂದ ಪಡೆಯುತ್ತಿರುವ ಕಾರ್ಖಾನೆಗಳು) ವಿವರಗಳನ್ನು ನೀಡುವುದು?

ಆ) ಈ ಎಲ್ಲಾ ಕಾರ್ಖಾನೆಗಳು ಸಕಾಲಕ್ಕೆ ಕಬ್ಬನ್ನು ರೈತರಿಂದ ತೆಗೆದುಕೊಂಡು ರೈತರಿಗೆ ಸಕಾಲಕ್ಕೆ ಹಣವನ್ನು ಪಾವತಿ ಮಾಡುತ್ತಿರುವರೆ? (ವಿವರ ನೀಡುವುದು)

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಸುಮಾರು 2,36,396 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಬೆಳೆಯಬಹುದಾದ ಕಬ್ಬಿನ ಪ್ರಮಾಣ 218 ಲಕ್ಷ ಮೆ.ಟನ್ ಜಿಲ್ಲಾವಾರು ಇರುವ ಸಕ್ಕರೆ ಕಾರ್ಖಾನೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸಾಮಾನ್ಯವಾಗಿ ಈ ಎಲ್ಲಾ ಸಕ್ಕರೆ ಕಾರ್ಖಾನೆಗಳು ರೈತರಿಂದ ಕಬ್ಬನ್ನು ಸಕಾಲಕ್ಕೆ ಖರೀದಿಸುತ್ತಿರುತ್ತವೆ. ಸಕ್ಕರೆ ಕಾರ್ಖಾನೆಗಳು ರೈತರಿಗೆ ಕಬ್ಬಿನ ಬೆಲೆ ಬಾಕಿ ತೀರುವಳಿ ಮಾಡಲು

ತಮ್ಮಲ್ಲಿರುವ ಸಕ್ಕರೆ ಮಾರಾಟ ಮಾಡಬೇಕಾಗಿರುತ್ತದೆ. ಸಕ್ಕರೆ ಬಿಡುಗಡೆಯಾದಂತೆ ಸಕ್ಕರೆ ಮಾರಾಟ ಮಾಡಿ ಕಬ್ಬಿನ ಬೆಲೆ ತೀರುವಳಿಯ ಪ್ರಕ್ರಿಯೆ ನಿರಂತರವಾಗಿ ನಡೆದಿರುತ್ತದೆ. ಕೆಲವೊಂದು ವಿಶಿಷ್ಟ ಸನ್ನಿವೇಶಗಳಲ್ಲಿ ಮಾತ್ರ ಈ ಪ್ರಕ್ರಿಯೆಗೆ ತಡೆಯುಂಟಾಗಿ ಅಲ್ಪ ಕಾಲಾವಧಿಗೆ ಬಾಕಿ ಉಳಿಯುವ ಸಾಧ್ಯತೆ ಇರುತ್ತದೆ. ಹೆಚ್ಚಿನ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳು ಅಲ್ಪ ಕಾಲದವರೆಗೆ ಬಾಕಿ ಉಳಿಸಿಕೊಂಡಿರುವುದು ಕಂಡು ಬರುತ್ತದೆ. ಕೆಲವೊಂದು ಕಾರ್ಖಾನೆಗಳಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ಹೆಚ್ಚಿನ ಅವಧಿಗೆ ಬಾಕಿ ಇರುವುದು ಕೂಡಾ ಕಂಡು ಬರುತ್ತದೆ.

ಅನುಬಂಧ - 1

ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಸ್ಥಾಪಿತವಾಗಿರುವ ಸಕ್ಕರೆ ಕಾರ್ಖಾನೆಗಳ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು		ಕಾರ್ಖಾನೆಯ ಹೆಸರು	
1.	ಬೆಳಗಾಂ	ಖಾನಾಪುರ	(1)	ಭಾಗ್ಯಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ (ನಿ)	(ಸ)
		ಗೋಕಾಕ್	(2)	ಘಟಪ್ರಭಾ -"-	(ಸ)
		ಚಿಕ್ಕೋಡಿ	(3)	ದೂದ್‌ಗಂಗಾ ಕೃಷ್ಣಾ -"-	(ಸ)
		ನಿಪ್ಪಾಣಿ	(4)	ಹಾಲಸಿದ್ದನಾಥ -"-	(ಸ)
		ಹುಕ್ಕೇರಿ	(5)	ಹಿರಣ್ಯಕೇಶಿ -"-	(ಸ)
		ಬೈಲಹೊಂಗಲ	(6)	ಮಲಪ್ರಭಾ -"-	(ಸ)
		ರಾಯಭಾಗ್	(7)	ರಾಯಬಾಗ್ -"-	(ಸ)
		ಅಥಣಿ	(8)	ಉಗಾರ್ ಶುಗರ್ ವರ್ಕ್ಸ್	(ಖಾ)
			(9)	ರೇಣುಕಾ ಶುಗರ್ಸ್	(ಖಾ)
2.	ಬಳ್ಳಾರಿ	ಹೊಸಪೇಟೆ	(1)	ಇಂಡಿಯಾ ಶುಗರ್ಸ್ ಮತ್ತು ರಿಫೈನರೀಸ್	(ಖಾ)
			(2)	ಸುಂದರಿ ಶುಗರ್ಸ	(ಖಾ)
		ದೇಶನೂರು	(3)	ಸಿರಗುಪ್ಪ ಶುಗರ್ಸ್ ಮತ್ತು ಕೆಮಿಕಲ್ಸ್	(ಖಾ)
3.	ಬೀದರ್	ಹುಮ್ನಾಬಾದ್	(1)	ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (ನಿ)	(ಸ)
4.	ಬಿಜಾಪುರ	ಬಿಜಾಪುರ	(1)	ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ)	(ಸ)
5.	ಬಾಗಲಕೋಟೆ	ಮುಧೋಳ್	(1)	ರೈತರ -"-	(ಸ)
		ಸಮೀರವಾಡಿ	(2)	ಗೋದಾವರಿ ಶುಗರ್ಸ್	(ಖಾ)
		ಜಮಖಂಡಿ	(3)	ಪ್ರಭುಲಿಂಗೇಶ್ವರ ಶುಗರ್ಸ್ ಲಿ.	(ಖಾ)
6.	ಚಾಮರಾಜನಗರ	ಕೊಳ್ಳೇಗಾಲ	(1)	ಮಹದೇಶ್ವರ ಶುಗರ್ಸ್	(ಖಾ)

ಕ್ರ. ಸಂ.	ಜಿಲ್ಲೆಯ ಹೆಸರು	ತಾಲ್ಲೂಕು		ಕಾರ್ಖಾನೆಯ ಹೆಸರು	
7.	ಚಿತ್ರದುರ್ಗ	ಹಿರಿಯೂರು	(1)	ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ	(ಸ)
8.	ದಾವಣಗೆರೆ	ದಾವಣಗೆರೆ	(1)	ಭದ್ರಾ -"-	(ಸ)
			(2)	ದಾವಣಗೆರೆ ಶುಗರ್ಸ್	(ಖಾ)
		ಹರಪನಹಳ್ಳಿ	(3)	ಶಾಮನೂರು ಶುಗರ್ಸ್	(ಖಾ)
9.	ಗುಲ್ಬರ್ಗಾ	ಆಳಂದ	(1)	ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ (ನಿ)	(ಸ)
10.	ಹಾವೇರಿ	ಹಾವೇರಿ	(1)	ಕರ್ನಾಟಕ -"-	(ಸ)
11.	ಹಾಸನ	ಚನ್ನರಾಯಪಟ್ಟಣ	(1)	ಹೇಮಾವತಿ -"-	(ಸ)
12.	ಕೋಲಾರ	ಗೌರಿಬಿದನೂರು	(1)	ಸಿರಗುಪ್ಪ ಶುಗರ್ಸ್ ಮತ್ತು ಕೆಮಿಕಲ್ಸ್	(ಖಾ)
13.	ಕೊಪ್ಪಳ	ಗಂಗಾವತಿ	(1)	ಗಂಗಾವತಿ ಶುಗರ್ಸ್	(ಜಂಟಿ)
14.	ಮಂಡ್ಯ	ಪಾಂಡವಪುರ	(1)	ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ	(ಸ)
		ಮಂಡ್ಯ	(2)	ಮೈಸೂರು ಸಕ್ಕರೆ ಕಂಪನಿ	(ಸಾ)
		ಕೆ.ಆರ್. ಪೇಟೆ	(3)	ಐ.ಸಿ.ಎಲ್. ಶುಗರ್ಸ್	(ಖಾ)
		ಮದ್ದೂರು	(4)	ಶ್ರೀ ಚಾಮುಂಡೇಶ್ವರಿ ಶುಗರ್ಸ್	(ಖಾ)
15.	ಮೈಸೂರು	ಕೆ.ಆರ್. ನಗರ	(1)	ಶ್ರೀ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ	(ಸ)
		ನಂಜನಗೂಡು	(2)	ಬನ್ನಾರಿ ಅಮ್ಮನ್ ಶುಗರ್ಸ್	(ಖಾ)
16.	ಶಿವಮೊಗ್ಗ	ಭದ್ರಾವತಿ	(1)	ಎಂ.ಪಿ.ಎಂ. ಶುಗರ್ಸ್	(ಖಾ)
17.	ಉಡುಪಿ	ಉಡುಪಿ	(1)	ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ	(ಸ)

(ಸ) ಸಹಕಾರಿ ವಲಯ
(ಖಾ) ಖಾಸಗಿ ವಲಯ
(ಸಾ) ಸಾರ್ವಜನಿಕ ವಲಯ
(ಜಂಟಿ) ಜಂಟಿ ವಲಯ

ಬೆಂಗಳೂರಿನ ವಸಂತನಗರದ ಪೋಲೀಸ್ ಕ್ವಾರ್ಟರ್ಸ್‌ಗಳ ಕಾಮಗಾರಿ

4964 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?